# ಪ್ರಶಸ್ತಿ ಪಡೆದು ಧನ್ಯನಾದ ಆ ಕ್ಷಣ!

**ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರಿಂದ ಪ್ರಶಸ್ತಿ ಸ್ವೀಕರಿಸಿದ್ದು ನನ್ನ ಬದುಕಿನ ಅತ್ಯಂತ ಮಧುರ ಕ್ಷಣ. ಇದು ಎಂದಿಗೂ ನನಗೆ ಸವಿನೆನಪಾಗಿಯೇ ಉಳಿದಿದೆ.**

■ ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ



ಪ್ರಶಸ್ತಿಗಳ ಬೆನ್ನು ಹತ್ತಿ ಹೋಗದಿದ್ದರೂ ಸ್ವಪ್ರಯತ್ನದಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದದ್ದು ನನ್ನ ಸುದೈವ. ಬಡಕುಟುಂಬದಲ್ಲಿ ಜನಿಸಿದ ನನಗೆ ಈಗ ಉನ್ನತ ಹುದ್ದೆ ಇದ್ದರೂ ಬಾಲ್ಯದಲ್ಲಿ ಕಳೆದ ಕಷ್ಟದ ದಿನಗಳು ಜೀವನದುದ್ದಕ್ಕೂ ಮರೆಯುವಂಥದ್ದಲ್ಲ.

ರೈತಾಪಿ ಕುಟುಂಬದಲ್ಲಿ ಹುಟ್ಟಿದ ನನ್ನ ಓದು ಪ್ರಾರಂಭವಾಗಿದ್ದು ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ದೊಡ್ಡಮಗ್ಗೆ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠ ಶಾಲೆ. ನಾನು ಆ ಶಾಲೆಯಲ್ಲಿ ಏಳನೆಯ ತರಗತಿಯವರೆಗೂ ಓದಿನಲ್ಲಿ ಪ್ರಥಮ ಸ್ಥಾನದಲ್ಲಿ ಬರುತ್ತಿದ್ದೆ. ಆದರೆ ಇತರೆ ಚಟುವಟಿಕೆಗಳಲ್ಲಿ ನನಗೆ ಯಾವೊಂದು ಪ್ರಶಸ್ತಿಯು ಸಿಗುತ್ತಿರಲಿಲ್ಲ. ನಂತರ ಓದಿನ ಬಗ್ಗೆ ಹೆಚ್ಚೆಚ್ಚು ಗಮನ ಕೊಟ್ಟು ಸ್ಪರ್ಧೆಗಳಲ್ಲಿ ಭಾಗವಹಿಸಬಾರದೆಂದು ತೀರ್ಮಾನಿಸಿದೆ. ಆ ಶಾಲೆಯಲ್ಲಿ ಏಳನೆ ತರಗತಿಯಲ್ಲಿ ಅತೀ ಹೆಚ್ಚು ಅಂಕ ಪಡೆದು ಮೊದಲಿಗನಾಗಿ ಪಾಸಾಗಿ, ಹೈಸ್ಕೂಲಿಗೆ ವರ್ಗಾವಣೆ ಪತ್ರ ಪಡೆಯಲು ಹೋದೆ.

ಅಲ್ಲಿ ಪ್ರಭಾರಿ ಮುಖ್ಯೋಪಾಧ್ಯಾಯರಾಗಿದ್ದ ರಾಮನಾಥ ಅಯ್ಯಂಗಾರ್ ಅವರು ನಮ್ಮ ತಂದೆಗೆ 'ನಿಮ್ಮ ಮಗನಿಗೆ ಸ್ವಲ್ಪ ಆಂಗ್ಲ ಭಾಷೆಯ ಜ್ಞಾನದ ಅವಶ್ಯಕತೆಯಿದೆ, ಮುಂದೊಂದು ದಿನ ಉನ್ನತ ಹುದ್ದೆಗೆ ಹೋದಾಗ ಉಪಯೋಗಕ್ಕೆ ಬರುತ್ತದೆ' ಎಂದು ಸಲಹೆ ಕೊಟ್ಟರು.

ಇದರಿಂದಾಗಿ ನನ್ನ ಹೈಸ್ಕೂಲ್ ಓದು ಹಳ್ಳಿಯಿಂದ ಅರಕಲಗೂಡು ನಗರದ ಜ್ಯೋತಿ ಕಾನ್ವೆಂಟ್‌ಗೆ ವರ್ಗವಾಯಿತು. ನಂತರ ಡಿಪ್ಲೊಮಾವನ್ನು ಕೊಡಗಿನ ಕುಶಾಲನಗರದ ಓದಿ ಅಲ್ಲಿಯೂ ಸಹ ಕಾಲೇಜಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಮೊದಲಿಗನಾಗಿ ತೇರ್ಗಡೆಯಾದೆ. ಎಂಜಿನಿಯರಿಂಗ್ ಓದಲು ಅವಕಾಶ ಸಿಕ್ಕಿದ್ದರೂ ಸಹ ಮನೆಯ ಹಣಕಾಸಿನ ಪರಿಸ್ಥಿತಿ ಅಂತಹ ಒಳ್ಳೆಯ ಮಟ್ಟದಲ್ಲಿ ಇಲ್ಲದಿದ್ದರಿಂದ ಓದಿಗಿಂತ ದುಡಿಯಬೇಕೆಂಬ ಹಟಕ್ಕೆ ಬಿದ್ದೆ. ಎಚ್.ಎ.ಎಲ್‌ನಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಆಯ್ಕೆ ಯಾದೆ. ಅಂತಹ ಸಂದರ್ಭದಲ್ಲಿ ಆಶ್ರಯಕೊಟ್ಟ ಎಚ್.ಎ.ಎಲ್ ಸಂಸ್ಥೆಗೆ, ರಾತ್ರಿ ತಂಗಲು ಕಷ್ಟ ಕಾಲದಲ್ಲಿ ಸ್ಥಳಕೊಟ್ಟ ರಮೇಶ್, ರವಿ, ವೆಂಕಟೇಶ್, ಕನಕಪುರದ ರವಿಕುಮಾರ್ ಮತ್ತು ಮುತ್ತುರಾಜಗೆ ನನ್ನ ಕೃತಜ್ಞತೆಗಳು. ಎಚ್.ಎ.ಎಲ್‌ನಲ್ಲಿ ಕ್ರಿ.ಶ.2000 ಇಸವಿಯಲ್ಲಿ ಕೊಡುತ್ತಿದ್ದ ತರಬೇತಿ ಭತ್ಯೆ ಬರೀ 800ರೂ.ಗಳು. ಇದರಲ್ಲಿ ಬೆಂಗಳೂರಿನಲ್ಲಿ ಜೀವನ ನಡೆಸುವುದು ತುಂಬಾ ಕಷ್ಟವಾಗುತ್ತಿತ್ತು. ಮನೆಯಲ್ಲಿ ದುಡ್ಡು ಕೇಳಲು ಸ್ವಾಭಿಮಾನ ಅಡ್ಡಿಬರುತ್ತಿತ್ತು. ಆಗ ವಿಭೂತಿಪುರದ ಒಂದು ಶೀಟ್ ರೂಮಿನಲ್ಲೇ 35ರಿಂದ 40 ಹುಡುಗರು ವಾಸಿಸುತ್ತಿದ್ದರು. ಈ ರೂಮನ್ನೇ ಸಮಯಕ್ಕನುಸಾರವಾಗಿ ಬೆಡ್‌ರೂಮ್, ಕಿಚನ್ ಮತ್ತು ಡೈನಿಂಗ್ ಹಾಲ್‌ಗಳಾಗಿ ಮಾರ್ಪಡಿಸಿಕೊಳ್ಳುತ್ತಿದ್ದೆವು. ಕೊನೆಗೆ ಬಂದವನು ಮೊದಲು ನಿದ್ರಿಸುತ್ತಿದ್ದವನ ಬೆಡ್ ಶೀಟ್ ಮತ್ತು ತಲೆದಿಂಬನ್ನು ಕಿತ್ತುಕೊಂಡು ಮಲಗುತ್ತಿದ್ದ. ಊಟಕ್ಕೂ ಹರಸಾಹಸ ಮಾಡಬೇಕಾಗಿತ್ತು. 2002ರಲ್ಲಿ ರಕ್ಷಣಾ ಮಂತ್ರಾಲಯದ ಜಿ.ಟಿ. ಆರ್.ಇ.ಯಲ್ಲಿ ಕಾರ್ಮಿಕನಾಗಿ ಕೆಲಸಕ್ಕೆ ಸೇರಿ ಇಂದು ಗಜೆಟೆಡ್ ಆಫೀಸರ್ ಆಗಿ ಪದೋನ್ನತಿ ಪಡೆದೆ. ಜೀವನ ನಡೆಸಲು ಕೆಲಸ ಸಿಕ್ಕಿದ ನಂತರ ನಾನು ಸಣ್ಣ ಕಥೆ, ಕವನ, ವೈಜ್ಞಾನಿಕ ಲೇಖನಗಳು, ಅಡುಗೆ ರೆಸಿಪಿಗಳನ್ನು ಪತ್ರಿಕೆಗಳಿಗೆ ಬರೆಯಲು ಪ್ರಾರಂಭಿಸಿದೆ. ಕಾರ್ಖಾನೆಗಳಲ್ಲಿ ನಡೆಯುವ ರಸಪ್ರಶ್ನೆಗಳು, ಪತ್ರಿಕೆಗಳಲ್ಲಿ ನಡೆಸುವ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದೆ. ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯಲ್ಲಿ ಪ್ರತಿವರ್ಷ ರಾಜ್ಯೋತ್ಸವಕ್ಕೆ ರಸಪ್ರಶ್ನೆ ಬರಹ ಸ್ಪರ್ಧೆಯನ್ನು ಏರ್ಪಡಿಸುತ್ತಿದ್ದರು.

ಮೊದಲ ವರ್ಷದಲ್ಲಿ ಪ್ರಯತ್ನಿಸಿದೆ, ಪ್ರಶಸ್ತಿ ಸಿಗಲಿಲ್ಲ. ಎರಡನೆ ವರ್ಷ ನನಗೆ ಬಹುಮಾನ ಬಂತು. ಇದು ನನ್ನ ಜೀವನದಲ್ಲಿ ಸಿಕ್ಕಿದ ಮೊದಲ ಬಹುಮಾನ. ಆ ಬಹುಮಾನವನ್ನು ನಾನು ಸ್ವೀಕರಿಸಿದ್ದು ಭ್ರಷ್ಟಾಚಾರಿಗಳಿಗೆ ಸಿಂಹಸ್ವಪ್ನವಾಗಿದ್ದ ನ್ಯಾಯಮೂರ್ತಿ ಎನ್.ವೆಂಕಟಾಚಲಯ್ಯ ಅವರಿಂದ. ಅದಾದ ನಂತರ ಸಂಸ್ಥೆಯಲ್ಲಿ ಪ್ರತಿವರ್ಷ ಒಂದಿಲ್ಲೊಂದು ಪ್ರಶಸ್ತಿ ಬರುತ್ತಿದ್ದವು. ಇದರಿಂದಾಗಿ ನನ್ನನ್ನು ಸ್ಪರ್ಧೆಯನ್ನು ನಡೆಸುವ ಸಮಿತಿಯ ಸದಸ್ಯನನ್ನಾಗಿ ಮಾಡಿದರು.

ಈಗಲೂ ಸಹ ನಾನು ಸಂಸ್ಥೆಯಲ್ಲಿ ಪ್ರತಿವರ್ಷ ಸ್ಪರ್ಧೆಗಳನ್ನು ನಡೆಸಿಕೊಡುತ್ತಿದ್ದೇನೆ. 'ಸುಧಾ' ಪತ್ರಿಕೆ ಪ್ರಶ್ನೋತ್ತರ ಸ್ಪರ್ಧೆ, ಪ್ರಜಾವಾಣಿಯ ಚಿನ್ನ ಗೆಲ್ಲಿ ಸ್ಪರ್ಧೆ ಮತ್ತು ಹೇಳಿ ಗೆಲ್ಲಿ ಬಂಪರ್ ಬಹುಮಾನ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗೆದ್ದಿದ್ದೇನೆ. ಒಂದಾನೊಂದು ಕಾಲದಲ್ಲಿ ನನಗೆ ಪ್ರಶಸ್ತಿಗಳು ಸಿಗುತ್ತಿಲ್ಲವಲ್ಲಾ ಎಂದು ಕೊರಗುತ್ತಿದ್ದೆ, ಈಗ ಪ್ರಶಸ್ತಿಗಳು ಸುರಿಮಳೆಯೇ ನನ್ನ ಪಾಲಾಗುತ್ತಿದೆ. ■